**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 06-02-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಶ್ರೀ.ಹೆಚ್ ಎಸ್ ವಕೀಲರವರಿಂದಃ -**

ಆರೋಪಿಯು ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿ ಆರೋಪಿಯ ಗಂಡ ಸುಮಾರು ವರ್ಷದಿಂದ ಪರಿಚಯ ಎನ್ನುತ್ತಾರೆ. ಆರೋಪಿಯು 15-20 ವರ್ಷಗಳಿಂದ ಪರಿಚಯವಿದ್ದಾರೆ. ಆರೋಪಿಯು ಗೃಹಿಣಿ. ಆರೋಪಿಯನ್ನು ನಾನು ಎಂದೂ ಬೇಟಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2021 ರಲ್ಲಿಯೆ ಭೇಟಿ ಮಾಡಿದ್ದೆನು ಎನ್ನುತ್ತಾರೆ. 2021 ರ ಅವಧಿಯ 8 ನೇ ತಿಂಗಳಿನಲ್ಲಿ ಅವರ ಊರಿನಲ್ಲಿಯೆ ಭೇಟಿ ಆಗಿದ್ದೇವು. ಸಾಕ್ಷಿ ಮುಂದುವರೆದು 2-3 ಬಾರಿ ಬೆಸಗರಹಳ್ಳಿ ಮತ್ತು ಕೆರೆಮೇಗಳದೊಡ್ಡಿಯಲ್ಲಿ ಭೇಟಿ ಆಗಿದ್ದೇವು ಎನ್ನುತ್ತಾರೆ. ಆರೋಪಿಯು ಗೃಹಿಣಿಯಾಗಿದ್ದು ಕುಟುಂಬದ ಯಜಮಾನಿಕೆಯನ್ನು ಆಕೆಯ ಗಂಡ ವಿಜಯ್ ಮಾಡುತ್ತಾರೆಂದರೆ ಸರಿ.

ಆರೋಪಿಯು ಮಕ್ಕಳ ಶಾಲಾ ಶುಲ್ಕ ಪಾವತಿಸಲು ಮತ್ತು ಮನೆಯ ಖರ್ಚಿಗೆಂದು ಸಾಲ ಪಡೆದಿರುತ್ತಾರೆ. ಸದರಿ ವಿಚಾರವನ್ನು ನನ್ನ ನೋಟೀಸ್ ಮತ್ತು ದೂರಿನಲ್ಲಿ ಹೇಳಿದ್ದೆನೆ. ಕುಟುಂಬದ ಯಜಮಾನಿಕೆಯನ್ನು ಆರೋಪಿಯ ಗಂಡ ಮಾಡುವುದರಿಂದ ಆರೋಪಿಗೆ ಸಾಲ ಕೇಳುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ಜೊತೆಯಲ್ಲಿಯೇ ಬೆಸಗರಹಳ್ಳಿಯ ಅವರ ಮನೆಯಲ್ಲಿ ಕೇಳಿದ್ದರು ಎನ್ನುತ್ತಾರೆ.

ಜ್ಞಾನಾನಂದ ಎಂಬುವವರು ನನ್ನ ಸೋದರ ಮಾವ. ಸದರಿಯವರು ಆರೋಪಿಯವರ ಗಂಡನ ವಿರುದ್ಧ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಅದರಂತೆ ಸದರಿಯವರು ಆರೋಪಿಯ ಗಂಡನಿಂದ ಜಮೀನಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಆಕೆಯ ಗಂಡ ನನ್ನ ಮಾವನಿಗೆ ಜಮೀನು ನೀಡಲಿಲ್ಲ ಎಂಬ ಕಾರಣದಿಂದ ವಿಜಯ್ ರವರೊಂದಿಗೆ ಓಡಾಡುತ್ತಿದ್ದ ಸಂಧರ್ಭದಲ್ಲಿ ಸದರಿಯವರ ಚೆಕ್ ನ್ನು ಕಳ್ಳತನ ಮಾಡಿ ನಿಮ್ಮ ಮೂಲಕ ಮತ್ತು ಸದರಿಯವರು ಪ್ರಕರಣ ದಾಖಲಿಸಿದ್ದಾರೆಂದರೆ ಸರಿಯಲ್ಲ. ಆರೋಪಿಯ ಕುಟುಂಬದಲ್ಲಿ ಹಣಕಾಸಿನ ಸಮಸ್ಯೆ ಬಂದಲ್ಲಿ ಅವರಲ್ಲಿಯೇ ಸಾಕಷ್ಟು ಜಮೀನು ಇರುವುದರಿಂದ ಅದನ್ನು ಮಾರಾಟ ಮಾಡಿ ಅಥವಾ ಕ್ರಯದ ಕರಾರು ಮಾಡಿ ಸಮಸ್ಯೆ ಬಗೆಹರಿಸಿಕೊಳ್ಳುತ್ತಾರೆಯೇ ಹೊರತು ಯಾರಿಂದಲೂ ಸಾಲ

ಪಡೆಯುವುದಿಲ್ಲ ಮತ್ತು ನೀಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿಯು ಅವರ ವೈಯಕ್ತಿಕ ವಿಚಾರ ಎನ್ನುತ್ತಾರೆ.

ಆರೋಪಿಯ ಗಂಡ ಮೂಲತಃ ಆಸ್ತಿವಂತರು ಎಂದರೆ ಸರಿ. ತಮ್ಮ ಕಷ್ಟಗಳಿಗೆ ಜಮೀನುಗಳನ್ನು ಮಾರಾಟ ಮಾಡಿದ್ದು, ಪ್ರಸುತ್ತ ಅವರ ಬಳಿ ಯಾವುದೇ ಜಮೀನು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯನ್ನು ಕೇವಲ ನೋಡಿರುವುದನ್ನು ಹೊರತುಪಡಿಸಿ ಅವರೊಂದಿಗೆ ಯಾವುದೇ ಮಾತುಕತೆಯಾಗಿಲ್ಲ ಮತ್ತು ಯಾವುದೇ ನೀಡಿಲ್ಲದಿದ್ದರೂ ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

ಆರೋಪಿಗೆ ಇಬ್ಬರು ಮಕ್ಕಳು. ಆರೋಪಿಗೆ ಒಂದು ನೋಟೀಸ್ ಜಾರಿಯಾಗಿದ್ದು, ಮತ್ತೊಂದು ಜಾರಿಯಾಗಿಲ್ಲ ಎಂಬ ಬಗ್ಗೆ ಮಾಹಿತಿ ಇದೆ. ಆರೋಪಿಯ ಗಂಡನ ಮನೆ ಮುದಿಗೆರೆ ಗ್ರಾಮ ಎಂದರೆ ಸರಿ. ಆರೋಪಿಯವರು ಸುಮಾರು 5-6 ವರ್ಷಗಳಿಂದ ಬೆಸಗರಹಳ್ಳಿಯ ಬಾಡಿಗೆಯ ಮನೆಯಲ್ಲಿ ವಾಸಿಸುತ್ತಿದ್ದಾರೆ. ಸದರಿ ವಿಚಾರ ನನಗೆ ಗೊತ್ತಿದೆ. ಆರೋಪಿಯ ಗಂಡನ ಮನೆ ಮುದಿಗೆರೆ ಗ್ರಾಮ ಎಂಬುದು ನನಗೆ ಗೊತ್ತಿದೆ. ನೋಟೀಸ್ ನ್ನು ಬೆಸಗರಹಳ್ಳಿ ಮತ್ತು ಕೆರೆಮೇಗಳದೊಡ್ಡಿ ಗ್ರಾಮಕ್ಕೆ ನೀಡಿದ್ದೆ. ಕೆರೆಮೇಗಳದೊಡ್ಡಿಯಲ್ಲಿ ಆರೋಪಿಯವರು ವಾಸಿಸುತ್ತಿಲ್ಲ ಎಂಬ ವಿಚಾರ ನನಗೆ ಗೊತ್ತಿದ್ದರೂ ಕೂಡ ಉದ್ದೇಶಪೂರ್ವಕವಾಗಿ ನೋಟೀಸ್ ನೀಡಿ, ಅಂಚೇ ಇಲಾಖೆಯವರ ಜೊತೆ ಶಾಮೀಲಾಗಿ ತಿರಸ್ಕಾರಿಸಿದ್ದಾರೆಂದು ಹಿಂಬರಹ ಪಡೆದಿದ್ದೆನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿಯು ಅಲ್ಲಿಯೂ ವಾಸಿಸುತ್ತಿದ್ದರು ಎನ್ನುತ್ತಾರೆ.

ಸಾಮಾನ್ಯವಾಗಿ ಗೃಹಿಣಿಯರಿಗೆ ಯಾವುದೇ ವ್ಯಕ್ತಿಯು 5 ಲಕ್ಷದ ಅಧಿಕ ಮೊತ್ತದ ಸಾಲವನ್ನು ನೀಡುವುದಿಲ್ಲ ಎಂದರೆ ಸಾಕ್ಷಿ ಸಂಬಂಧಿಕರಾಗಿರುವುದರಿಂದ ನೀಡಿದ್ದೆನೆ ಎನ್ನುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ 5 ಎಕರೆ ಜಮೀನು ಇದೆ. ಮನೆಯಲ್ಲಿ ನನ್ನ ತಾಯಿ, ನನ್ನ ಹೆಂಡತಿ, ನಾನು ಮತ್ತು ನನ್ನ ಇಬ್ಬರು ಮಕ್ಕಳು ಇದ್ದೇವೆ. ಮಕ್ಕಳಲ್ಲಿ ಒಬ್ಬರು 6 ನೇ ತರಗತಿ, ಮತ್ತೊಬ್ಬರು ಯುಕೆಜಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಜಮೀನಿನಲ್ಲಿ ಕಬ್ಬು, ರೇಷ್ಮೆ, ಭತ್ತ, ಬೆಳೆಯುತ್ತೆವೆ. 2 ವರೆ ಎಕರೆ ಜಮೀನಿನಲ್ಲಿ ಕಬ್ಬು ಮತ್ತು 1 ವರೆ ಎಕರೆ ಜಮೀನಿನಲ್ಲಿ ರೇಷ್ಮೆ ಬೆಳೆಯುತ್ತೇನೆ. ಕಬ್ಬನ್ನು ಕೊಪ್ಪದ ಸಕ್ಕರೆ ಪ್ಯಾಕ್ಟರಿಗೆ ಸರಬರಾಜು ಮಾಡುತ್ತೇನೆ. ಸಾಮಾನ್ಯವಾಗಿ ವಾರ್ಷಿಕ 2-4 ಲಕ್ಷ ಆದಾಯವಿದ್ದು, ಬಿಲ್ ನನ್ನ ಬಳಿ ಇದೆ. 100 ರಿಂದ ಸುಮಾರು 130 ಕೆಜಿ

ರೇಷ್ಮೆ ಬೆಳೆಯುತ್ತೇನೆ. ಒಂದು ಬೆಳೆಗೆ 20-30 ಸಾವಿರ ಆದಾಯ ಬರುತ್ತಿತ್ತು, ಪ್ರಸುತ್ತ 40 ಸಾವಿರ ಆದಾಯ ಬರುತ್ತದೆ. ಸದರಿ ರೇಷ್ಮೆ ಸರಬರಾಜು ಮಾಡಿದ ಬಗ್ಗೆ ಬಿಲ್ ಹಾಜರುಪಡಿಸುತ್ತೇನೆ. ನನ್ನ ತಾಯಿಯ ಹೆಸರಿನಲ್ಲಿ ಎಪಿಎಲ್ ಕಾರ್ಡ್ ಮತ್ತು ನನ್ನ ಹೆಂಡತಿಯ ಹೆಸರಿನಲ್ಲಿ ಬಿಪಿಎಲ್ ಕಾರ್ಡ್ ಇದೆ. ನನ್ನೊಂದಿಗೆ ನನ್ನ ತಂಗಿ ಇದ್ದಾರೆ. ಸದರಿ ಪಡಿತರ ಚೀಟಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ.

ಆರೋಪಿಗೆ ಸಾಲ ನೀಡಿರುವುದನ್ನು ಹೊರತುಪಡಿಸಿ ಇತರರಿಗೂ ಸ್ವಲ್ಪ ಸಾಲ ನೀಡಿದ್ದೆನೆ ಮತ್ತು 10 ಗುಂಟೆ ಜಮೀನನ್ನು ಖರೀದಿ ಮಾಡಿದ್ದೆನೆ. ರಾಜೇಶ್ ಎಂಬುವವರಿಗೆ 20 ಸಾವಿರ ಸಾಲ ನೀಡಿದ್ದೆನೆ. ನನಗೆ 25-30 ಸಾವಿರ ಸಾಲ ನೀಡುವ ಚೈತನ್ಯ ಹೊಂದಿದ್ದು, 5 ಲಕ್ಷ ಸಾಲ ನೀಡುವ ಚೈತನ್ಯ ಇಲ್ಲ ಎಂದರೆ ಸರಿಯಲ್ಲ. 5 ಲಕ್ಷ ನಗದು ಇಟ್ಟಿದ್ದೆ ಎಂದು ತೋರಿಸಲು ದಾಖಲಾತಿ ಇದೇಯೇ ಎಂದರೆ ಸಾಕ್ಷಿ ಕಬ್ಬಿನ ಹಣವನ್ನು ಡ್ರಾ ಮಾಡಿ ತಂದು ಇಟ್ಟಿದ್ದೆ ಎನ್ನುತ್ತಾರೆ. ಸದರಿ ಹಣವನ್ನು ಸಾಲ ನೀಡಿದ ಎಷ್ಟು ದಿನದ ಮುಂಚೆ ಡ್ರಾ ಮಾಡಿದ್ದೀರಿ ಎಂದರೆ ಸಾಕ್ಷಿ 1 ತಿಂಗಳ ಮುಂಚೆಯೇ ಕೇಳಿದ್ದರಿಂದ ಡ್ರಾ ಮಾಡಿ ಇಟ್ಟಿದ್ದೆ ಎನ್ನುತ್ತಾರೆ. ದಿ 02-09-2021 ರ ಪೂರ್ವದಲ್ಲಿ ನಾನು ನನ್ನ ಖಾತೆಯಿಂದ ಹಣ ಡ್ರಾ ಮಾಡಿದ್ದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಲು ತೊಂದರೆ ಇಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಾಕಾಶ ಕೋರಿದ್ದು, ಈಗಾಗಲೇ ಸಾಕಷ್ಟು ಅವಕಾಶ ನೀಡಿದ್ದರೂ ಪಾಟೀಸವಾಲು ಮಾಡಿಲ್ಲದ ಕಾರಣ, ಕೊನೆಯದಾಗಿ ಮುಂದುವರೆದ ಪಾಟೀಸವಾಲಿಗೆ ಕಾಲಾವಾಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು